ಅವರಿಗೆ ತಾತ್ಸಾರ ಬರಬಹುದು. ಅದಕ್ಕೆ ಒಂದೇ ದಾರಿ ಎಂದರೆ ಈ ದಿನದ ಪರಿಸ್ಥಿತಿ ಎದುರಿಸಲೇಬೇಕು! ಸಮಾಜ ಸೇವಕಿ ಪ್ರಶ್ನೆ ಹಾಕಿದರು, 'ಗಂಗಾ, ಅದೇನು ಬಂದೆ...?'

'...ಹೀಂಗೇ...'

'ಸಂಕೋಚ ಬೇಡ... ಏನು ಬಂದೆ ಹೇಳಮ್ಮ...'

'ಏನಿಲ್ರೀ... ನನ್ನ ಪೋರಿ ಬಗ್ಗೆ...' ಎನ್ನುತ್ತಿದ್ದಂತೆಯೇ ಅಲ್ಲಿ ಕುಳಿತಿದ್ದ ಮೂವರು ಪುರುಷರ ಮುಖಗಳೂ ಬಗೆ ಬಗೆ ಬಣ್ಣಗಳನ್ನು ಹೊರಚೆಲ್ಲಿದ್ದವು.

ಎಷ್ಟೋ ವರ್ಷಗಳಿಂದ ಸುನಂದ ಬನ್ನಪ್ಪನವರನ್ನು ಬಲ್ಲ ವಯಸ್ಸು ಮಾಗಿದ ಶ್ರೀಧರ ಭಟ್ಟರಿಗೆ ಮಾತು ಬದಲಿಸುವ ಕಲೆ ಗೊತ್ತಿತ್ತು!

ಅವರ ಗಮನ ಮಗುವಿನತ್ತ ಹೋದಂತೆ ಅವರ ಬಾಯಿ ಹೇಳಿತು,

'ಏನ್ ಪಾಪೂ... ನಿಮ್ಮಮ್ಮ ನಿನ್ನನ್ನ ಕಿನ್ನರಿ ಹಾಗೆ ಅಲಂಕಾರ ಮಾಡಿ ಕರ್‍ಕೊಂಡು ಬಂದಿದಾಳೆ...' ಎಂದು ಹಾಸ್ಯದ ನಗು ಚೆಲ್ಲಿ ಕೀಟಲೆ ಮಾಡುತ್ತ,

'ಅವ್ಳೆಷ್ಟೇ ನಿಂಗೆ ಅಲಂಕಾರ ಮಾಡಿದ್ರೂ ನೀನು ಮಾತ್ರಾ ಕೋತೀನೇ... ಒಂದು ನಿಮಿಷ ಒಂದ್ ಕಡೆ ಇರಲ್ಲ... ಆಗ್ಲೇ ನೋಡು ನಿನ್ನ ಕಣ್ಣು ಕೋಣೆ ಎಲ್ಲಾಕಡೆ ಸುತ್ತಾಡ್ತಿದೆ... ಏನು ತುಂಟಾಟ ನಿನ್ನ ತಲೇಲಿ ಕಣ್ಣು ಮುಚ್ಚಾಲೆ ಆಡೋಕೆ ಸಿದ್ಧವಾಗಿದೆ...? ಈಗ ನೀನು ಪುಟ್ಟ ಪಾಪು ಅಲ್ಲ... ದೊಡ್ಡೋಳು ಆಗಿದ್ದೀ... ಗಂಭೀರ ಕಲೀಬೇಕು... ನಿನ್ನಮ್ಮ ನಿಂಗೆ ಏನೂ ಕಲ್ಸೋದಿಲ್ಲೇನು...? ಕಾಡಿನ ಗಿಡದಂತೆ ಬೆಳೆಯಲು ಬಿಟ್ ಬಿಟ್ಟಿದ್ದಾಳೆ ಅಷ್ಟೇ.. ಪಾಪು ಇನ್ನೂ ಪಾಪೂನೇ ಇದ್ದೀ... ಬೆಳೆಯೋ ಹಂಗೇ ಇಲ್ಲ.'

ಅವರ ಮಾತಿಗೆ ಗಂಗಾ ಉತ್ತರಿಸಿದಳು, 'ಇಲ್ರೀ ಭಟ್ರಾ... ಅವ್ಳ ಹೆಸ್ರು ಈಗ ಪಾಪೂ ಅಲ್ರೀ... ಪೋರಿ ಹೆಸ್ರು ಇಂದ್ರಾಗಾಂಧಿ ಅಂತ ಇಟ್ಟೀನ್ರಿ...'

ಎಲ್ಲರಿಗೂ ಜೋರಾದ ನಗು ಬಂದಿತು. ಸುನಂದ ಹೇಳಿದರು, 'ಅದೇನೇ ಗಂಗಾ...? ಯಾರು ಈ ಹೆಸ್ರು ಇಡಲು ನಿಂಗೆ ಹೇಳಿಕೊಟ್ರು...!'

'ನಾನೇ!... ನಿಮ್ಮ ಬಂಗ್ಲೀಗೆ ಬಂದಾಗ... ನೀವು ಮಂದಿ ಎಲ್ಲಾ... ಈ ಹೆಸ್ರು ಹೇಳಿ ಮರ್‍ವಾದಿಯಿಂದ ಮಾತಾಡ್ತಿದ್ದು ಕೇಳಿದ್ದಿ... ಆಕಿ ತಸ್ವೀರು ಸಹಾ ಅಲ್ಲಿ ಹಾಕ್ಕೊಂಡೀರಿ... ಆಕಿ ದೇವ್ರಂಗ ದೊಡ್ಡ ಆಕಿ ಅದಾಳ ಅಂತ ಗೊತ್ತಾತು... ಆಕಿ ಹಂಗೇ ನನ್ನ ಕೂಸೂ ಆಗ್ಲಿ ಅಂತ ಆ ಹೆಸ್ರು ಇಟ್ಟೇನಿಯವ್ವಾರ... ನೀವು ಈ ನನ್ನ ಇಂದ್ರಾಗಾಂಧಿಗೆ ಹರಸ್ಲೇ ಬೇಕು...'

'ಇಂದಿರಾ ಗಾಂಧಿ'ಯವರನ್ನು ಗಂಗೆ ಹೇಳುವ ರೀತಿ ಕಂಡು, ನಗು ಬರುತ್ತಿದ್ದರೂ ಅದನ್ನು ಮರೆ ಮಾಚಿಕೊಂಡು ಸುನಂದ ಹೇಳಿದರು..

'ಅವ್ರ ಹಾಗೇ ದೇಶ ಆಳುವವಂತಾಗಿ ಬೆಳೀಲಿ ನಿನ್ನ ಮಗಳು...!' ಎನ್ನುತ್ತಾ ಮಗುವನ್ನು ಕರೆದು ಹಿಡಿದುಕೊಂಡು, 'ಏನ್ ಇಂದಿರಾ ಗಾಂಧಿಯವರೇ... ಚಾಕಲೇಟು ಬೇಕೇನು...?'

'ಹೂಂ ನ್ರೀ...' ಅಂದಿತು ಈ ಹೊಸ 'ಇಂದ್ರಾ ಗಾಂಧಿ'

ಸುನಂದಮ್ಮ ಪರ್ಸ್ ತೆಗೆದು ಅದರಲ್ಲಿದ್ದ ಚಾಕಲೇಟನ್ನು ಮಗುವಿಗೆ ಕೊಟ್ಟರು. ಮಗುವಿನ ಮುಖ ಹೂವಿನಂತೆ ಅರಳಿತು.

ಶಿವಣ್ಣ ಸುಮ್ಮನಿರದ ಗಂಗೆ ಮಗಳಿಗೆ ಪ್ರಶ್ನೆಯೊಂದನ್ನು ಎಸೆದ,

'....ನೀನು ಯಾರ ಮಗಳವ್ವಾ...?'

ಹುಡುಗಿ ಹೇಳಿತು, 'ನಾನು ಅವ್ವನ ಮಗ್ಳು ಇದೇನ್ರಿ...'

ಶಿವಣ್ಣ ಲೇವಡಿ ಮಾಡಿದ 'ನಿನ್ನ ಅಪ್ಪನ ಹೆಸರೇನ...?'

'....' ಹುಡುಗಿ ತಬ್ಬಿಬ್ಬಾಯಿತು.'

'ಶಿವ ನಕ್ಕು' ಹೋಗ್ಲಿ ನಿನ್ನ ಏನಂತ ಕರೀತಾರೆ...?'

'ಪಾಪು' ಎಂದಿತು ಮುಗ್ಧವಾಗಿ.

'ಇದೆಂತಾ ಹೆಸ್ರವ್ವಾ!... ಪಾಪ... ಪಾಪಿ... ಪೀಪಿ...'

ಸುನಂದ, ಅವನ ಮಾತನ್ನು ತಡೆಯಲು ನಡುವೆಯೇ ಹೇಳಿದರು,

'ಶಿವಣ್ಣ, ಹೀಗೆಲ್ಲಾ ಸಣ್ಣ ಮಗುವನ್ನು ಮಾತಾಡಿಸುವುದು ಸರಿಯಲ್ಲ... ಪಾಪದ ಕೂಸದು!...'

'....' ಹೌದು ಪಾಪಿ ಕೂಸು! ಎಂದುಕೊಂಡ ಶಿವಣ್ಣ.

ಈಗ ಶ್ರೀಧರ ಭಟ್ಟರ ವರಸೆ!' ಆದ್ರೂ... ಈ ಗಂಗೆ ಮಗೂನ ಸರ್‍ಯಾಗಿ ಬೆಳೆಸ್ತಿಲ್ಲ... ಕಾಡಿನ ಕಳೆ ಹಾಗೆ ಹುಚ್ಚು ಹುಚ್ಚಾಗಿ ಬೆಳೆಸ್ತಿದಾಳೆ... ಸ್ವಲ್ಪ ಕೂಡ ಭಯ, ಶಿಸ್ತು ಕಲಿಸಿಲ್ಲ... ಹೀಗೆ, ಮನಸ್ಸಿಗೆ ಬಂದ್ಹಾಗೆ ಮಕ್ಕಳನ್ನ ಯಾರಾದ್ರೂ ಬೆಳೆಸ್ತಾರೇನು...? ಹಠಮಾರಿ ತನ, ದುಷ್ಟತನ, ಸ್ವಾರ್ಥತೆ ಎಲ್ಲಾ ಇದೆ ಇದಕ್ಕೆ... ಗಂಗೆ, ನೀನು ಮೊದಲು ಮಗೂನ ಬೆಳೆಸೋ ರೀತಿ ಕಲೀಬೇಕು... ಈಗ ಅದಕ್ಕೆ ಶಿಕ್ಷಣ ಕೊಡದೇ ಹೋದ್ರೆ ಮುಂದೆ ಜೀವನದಲ್ಲಿ ಒದ್ದಾಡಬೇಕಾಗತ್ತೆ. ಗಿಡವಾಗಿ ಬಗ್ಗದ್ದು ಮರವಾದ ಮೇಲೆ ಬಗ್ಗುತ್ತೇನು?... ತಪ್ಪು, ಸರಿ ತಿಳ್ಯೋ ಹಾಗೆ ಮಕ್ಳನ್ನ ಬೆಳೆಸ್ಬೇಕು... ದೇವಸ್ಥಾನಕ್ಕೆ ಈ ಹುಡ್ಗಿ ಬಂದ್ರೆ ಜನವೆಲ್ಲಾ ಬೇಸ್ರ ಪಟ್ಕೋತಾರೆ... ಸ್ಕೂಲಿಗೆ ಸೇರ್‍ಸೋ ವಯಸ್ಸು ಬಂದಿದೆ... ಇವ್ಳ ರಂಪಾಟ ನೋಡಿದ್ರೆ ಯಾವ ಸ್ಕೂಲಲ್ಲೂ ಇವ್ಳನ್ನ ಸೇರಿಸ್ಕೊಳ್ಳಲ್ಲ...!'

ಭಟ್ಟರ ದೀರ್ಘ ಭಾಷಣವಾಗುತ್ತಿದ್ದಾಗ ಇಂದ್ರಾ ಗಾಂಧಿ ಆಗಲೇ ತೆರೆದಿದ್ದ ಕಿಟಕಿಯನ್ನು ಹತ್ತಿದ್ದಳು. ಅಲ್ಲಿಂದಾಚೆ ದುಮುಕಲು ಖುಷಿಯಿಂದ 'ಅವ್ವಾ' ಎನ್ನುತ್ತ ಇನ್ನೇನು ದುಮುಕಿ ಬಿಡಬೇಕು ಅನ್ನುವಷ್ಟರಲ್ಲಿ ಗಂಗೆ ಓಡಿ ಹೋಗಿ ಅವಳನ್ನು ಹಿಡಿದು ಕೆಳಗಿಳಿಸಿಕೊಂಡಳು. ಹಾಗೇ ಸುನಂದ ಅವರನ್ನು ನೋಡುತ್ತ ಹೇಳಿದಳು,

'ಹೌಂದ್ರೀ... ಅವ್ವಾರೇ... ನಂಗೆ ಇವ್ಳದ್ದೇ ಚಿಂತಿ ಆಗ್ಲಿಕ್ಕೆ ಹತ್ತೈತೆ. ನಾನ ಈಕೀನ ಛಲೋದಾಗೆ ಬೆಳೆಸ್ತಿದ್ದೀನ್ರೀ... ಆದ್ರ, ಈ ಪೋರೀ ಬ್ಯಾರೇನೇ ಅದಾಳ... ಬಯ್ಯೋದು, ಹೊಡ್ಯೋದು ಇವ್ಳಿಗೆ ಮುಟ್ಟೋದೇ ಇಲ್ರೀ... ಎಲ್ಲ ಪಾರೋಗ್ಳಂತಲ್ಲರೀ ಈಕಿ... ಬುದ್ಧಿ ಹ್ಯಾಂಗೊ ಆಗ್‌ಕೈತ್ರಿ... ನಾನೇನು ಮಾಡ್ಲೀ... ಬಾಳ ಚಿಂತಿ ಆಗ್ಯಾದೆ ಬಾಯಾಶ್ರೀ... ಈಗ ನೋಡ್ರೀ ನಾವು ಈಸೊಂದು ಮಂದಿ ಇಲ್ಲಿ ಇರೋ ಹಂಗೇ ಹ್ಯಾಗ ಕಣ್ತಪ್ಪಿಸಿ ಹೋಗಿ ಕಿಡಕಿ ಇಂದ ಆಚೆಗೆ ನೆಗೆಯಾಕ ಹೊಂಟಿದ್ಳು...! ನಾನು ಬ್ಯಾಗ ಹೋಗಿ ಹಿಡೀದಿದ್ರೆ ಹಾರಿ ಕೆಳಗೆಬಿದ್ದು ಈಟೊತ್ತಿಗೆ ಹಲ್ಲು ಮುರ್‍ಕೋತಿದ್ಳು... ಅವ್ವಾರಾ... ನೀವಾದ್ರೂ ನಂಗೆ ಹೇಳ್ರೀ... ನಾನು ಹ್ಯಾಂಗ ಬೆಳೆಸ್ಲಿ ಈಕೀನ್ನ...'

'ಗಂಗ... ನಿನ್ನ ಮಗಳು ಎಲ್ಲ ಮಕ್ಕಳಂತಲ್ಲ. ಇವಳಿಗೆ ಅತಿ ಚುರುಕಿನ ಕಾಯಿಲೆ ಇರೋ ಹಾಗಿದೆ.'

'ಯವ್ವಾರಾ... ಚುರುಕಾಗಿರೋದೂ ಒಂದು ಬ್ಯಾನಿ ಏನ್ರಿ...?'

'ಚುರುಕಲ್ಲ... ಅತಿ ಚುರುಕು ಒಂದು ಮನಸ್ಸಿನ ಕಾಯಿಲೆ ಅಂತಾರೆ... ಇಂತ ಮಕ್ಕಳನ್ನ ನಾನು ನೋಡಿದ್ದೀನಿ. ಈ ಮಕ್ಕಳ ಶಿಕ್ಷಣಕ್ಕೆ ಒಂದು ಪ್ರತ್ಯೇಕ ಶಿಕ್ಷಣ ಬೇಕಾಗುತ್ತೆ... ಅದಕ್ಕೆ ಟ್ರೈನಿಂಗ್ ತಗೊಂಡಿರೊ ಶಿಕ್ಷಕಿಯರು ಇರ್ತಾರೆ... ಬೆಂಗಳೂರಲ್ಲಿ ನಾನೊಂದು ಸ್ಕೂಲಿಗೆ ಮುಖ್ಯ ಅತಿಥಿಯಾಗಿ ಹೋಗಿದ್ದೆ... ನಿನ್ನ ಮಗಳನ್ನು ಅಂತಹದೊಂದು ಸ್ಕೂಲಿಗೆ ಸೇರ್‍ಸು... ಅವ್ಳು ಸರಿಯಾಗ್ತಾಳೆ... ನೀನು ಚಿಂತೆ ಮಾಡಬೇಡ... ನಾನು ಅವ್ಳನ್ನ ಆ ಶಾಲೆಗೆ ಸೇರ್‍ಸೋಕೆ ಎಲ್ಲಾ ಏರ್ಪಾಡು ಮಾಡ್ತೀನಿ.'

ಬೆಂಗಳೂರಿಗಾ...?' ಗಂಗೆ ಮುಖದಲ್ಲಿ ರಕ್ತ ಹೀರಿ ಹೋಯಿತು. 'ಒಲ್ಲೆ... ನಾ ಒಲ್ಲೆ... ಆಕಿನ ಅಷ್ಟು ದೂರ ಕಳಸ್ಲಾರೆವ್ವಾ... ನಾನಾ ಈಕಿನ ಸರಿ ಮಾಡ್ಲಿಕ್ಕೆ ನಂಗೇ ಏನಾರಾ ಹೇಳಿಕೊಡ್ರಿಲಾ... ಅದ್ರಂಗ ಬೆಳೆಸ್ತೀನ್ರಿ.'

'ನಿಂಗೆ ಅದು ಸಾಧ್ಯ ಆಗೊಲ್ಲ ಗಂಗಾ...' ಅದಕ್ಕೆ ಬೇರೆನೇ ಶಿಕ್ಷಣ ಇದೆ.'

ಅಷ್ಟರಲ್ಲಿ ಶಿವಣ್ಣ ಕುಹಕವಾಗಿ ಹೇಳಿದ.

'ಹೌದೂ.... ಶಾಲೆ ಸೇರ್‍ಸಾಕೆ ಮುಂದಾಗಡೆ ಈ ಪೋರಿ ತಂದೆ ಹೆಸ್ರು ಕೇಳ್ತಾರಲ್ಲ!... ಅದಕ್ಕೆ ಯಾನು ಹೇಳ್ತೀ ಗಂಗಾ...? ಅದೂ ಒಂದು ಸಮಸ್ಯಾ ಐತಲ್ಲಾ...'

ಗಂಗೆ ಅವನನ್ನು ಗುರ್‍ರನೆ ನೋಡಿದಾಗ, ಶ್ರೀಧರ ಭಟ್ಟರು ಆ ಕಂದನ ಅನಾರೋಗ್ಯ ಅರಿತ ಮೇಲೆ ಸ್ವಲ್ಪ ಮೃದುವಾಗಿದ್ದರಿಂದ ಶಿವಣ್ಣನ ಪರಿಹಾಸ್ಯ ಹೇಳಿದರು.

'ನಿಂದೆಲ್ಲಾ ಎಡವಟ್ಟು ಮಾತುಗಳೇ ಆಯ್ತು ಶಿವಣ್ಣ. ನಿನಗೆ ಸಂಬಂಧ

## ಕೃತಘ್ನ

ಮರ ಕೇಳಿತು ಮನುಜನಿಗೆ
ಹಣ್ಣು ಹಂಪಲು ಹೂವು ನೆರಳು
ಮತ್ತೇನು ಕೊಡಲಿ?
ಮನುಷ್ಯ ಹೇಳಲಿಲ್ಲ, ಕೇಳಲಿಲ್ಲ
ಇಟ್ಟ ಮರದ ಬುಡಕ್ಕೇ ಕೊಡಲಿ!

★ ಗಣೇಶ್ ಪ್ರಸಾದ್‌ಬಿ.ವಿ.

